**ಸೆಕ್ಯೂಲರಿಸಂ' ಸ್ಥಾಪನೆಯಲ್ಲಿ ಪೈಗಂಬರರ ಪಾತ್ರವೇನು?**

ಭಾರತದ ೪೪ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ವಿಶ್ವನಾಥ ಪ್ರತಾಪ ಸಿಂಹರು ಮಹಮ್ಮದ್ ಪೈಗಂಬರರ ಹುಟ್ಟಿದ ದಿನವಾದ 'ಅ. ೩' ರನ್ನು ರಾಷ್ಟ್ರೀಯ ರಜಾದಿನವನ್ನಾಗಿ ಘೋಷಿಸಿ ಮುಸಲ್ಮಾನ ಬಾಂಧವರ ಪ್ರೀತಿಯನ್ನು ಗಳಿಸಿದರು. ಇಂತಹ ದಿಟ್ಟವಾದ ಘೋಷಣೆಯನ್ನು ಮಾಡಿ ಜಾತ್ಯಾತೀತ ಮೌಲ್ಯಗಳನ್ನು ಅನುಷ್ಠಾನಪಡಿಸಿದ್ದಕ್ಕಾಗಿ ವಿ.ಪಿ.ಸಿಂಹರಿಗೆ ಅಭಿನಂದನೆ ಸಲ್ಲಬೇಕು. ಆದರೆ ಇದೇ ಸಂಧರ್ಭದಲ್ಲಿ ಈ ಜಾತ್ಯಾತೀತ ರಾಷ್ಟ್ರದ ನಿರ್ಮಾಣದಲ್ಲಿ ಮಹಮ್ಮದ್ ಪೈಗಂಬರರ ಪಾತ್ರವೇನೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಅದನ್ನು ಅವರು ತಿಳಿಸಬೇಕು. ಇಂದು ರಾಷ್ಟ್ರವು ಮಹಾತ್ಮಾ ಗಾಂಧಿಯವರ ರಾಷ್ಟ್ರ ಸೇವೆಗಾಗಿ ತನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದೆ. ಇಡೀ ರಾಷ್ಟ್ರದ ಮುಂದಾಳುತ್ವ ವಹಿಸಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ನಾವೆಲ್ಲರೂ ಅವರ ದೇಶಭಕ್ತಿ, ಸತ್ಯ ಮತ್ತು ಅಹಿಂಸೆಯ ತತ್ವಗಳನ್ನು ಗುರುತಿಸಿ ಗೌರವಿಸುತ್ತೇವೆ.

ಭಾರತದ ಇತಿಹಾಸವು ಋಷಿಮುನಿಗಳ ದಿವ್ಯದೃಷ್ಟಿಯ ಆಧಾರಧ ಮೇಲೆ ರೂಪುಗೊಂಡಿದೆ. ಈ ಋಷಿಮುನಿಗಳ ಚಿಂತನೆಯ ಫಲವೇ ಇಂದು ನಿರ್ಮಾಣಗೊಂಡಿರುವ 'ಭಾರತ ರಾಷ್ಟ್ರ'. ಆಚಾರ್ಯರಾದ ಶಂಕರ, ಮಧ್ವ, ರಾಮಾನುಜ, ಗುರುನಾನಕ್, ಬಸವೇಶ್ವರ ಮುಂತಾದವರನ್ನು ನೆನೆಯುವುದು ಈ ದೇಶದ ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯವಾಗಿದೆ. ಏಕೆಂದರೆ ಈ ಮಹಾನ್ ವ್ಯಕ್ತಿಗಳು ಕಾಲಕಾಲಕ್ಕೆ ಧರ್ಮ ಮತ್ತು ಈ ದೇಶದ ಸಂಸ್ಕೃತಿಯನ್ನು ನಮ್ಮ ಸಮಾಜಕ್ಕೆ ತಿಳಿಯಪಡಿಸಿ ಅದನ್ನು ಆಧ್ಯಾತ್ಮಿಕ ಮತ್ತು ಏಕರಾಷ್ಟ್ರೀಯವಾಗಿ ವಿಕಾಸಗೊಳಿಸಲು ಸರ್ವ ಪ್ರಯತ್ನ ಮಾಡಿದ್ದಾರೆ. ಇದೇ ರೀತಿಯಲ್ಲಿ ದೇಶಭಕ್ತರಾದ ಬಾಲಗಂಗಾದರ ತಿಲಕ್, ಲಾಲಾ ಲಜಪತ್ ರಾಯ್, ಮದನಮೋಹನ ಮಾಳವೀಯ, ರಾಜಾರಾಮ್ ಮೋಹನ್ ರಾಯ್, ಗೋಪಾಲಕೃಷ್ಣ ಗೋಖಲೆ, ದಯಾನಂದ ಸರಸ್ವತಿ, ಯುವ ಮೇಧಾವಿ ಸಂನ್ಯಾಸಿ ವಿವೇಕಾನಂದ, ಹಾಗೂ ಗೊಳವಲ್ಕರ್ ಮುಂತಾದವರು ರಾಷ್ಟ್ರದ ಐಕ್ಯವನ್ನು ಸಾಧಿಸುವಲ್ಲಿ ಮತ್ತು ದೇಶದ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಸರ್ಕಾರವು ಈ ಮೇಲೆ ಹೇಳಿದ ಎಲ್ಲಾ ಮಹಾಪುರುಷರ ಸಾಧನೆಗಳನ್ನೂ ಬದಿಗೊತ್ತಿ ಮಹಮ್ಮದ್ ಪೈಗಂಬರರ ಜನ್ಮ ದಿನಕ್ಕೆ ರಾಷ್ಟ್ರೀಯ ರಜಾದಿನವನ್ನು ಘೋಷಿಸಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುದೆ ! ಈ ದೇಶದ ಪ್ರಗತಿಗೆ ಹೋರಾಡಿದ ಹಾಗೂ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಪ್ರಾಣಾರ್ಪಣೆ ಮಾಡಿದವರನ್ನು ಸ್ಮರಿಸದೆ ಜಾತ್ಯಾತೀತತೆಯ ಹೆಸರಿನಲ್ಲಿ ಈ ದೇಶಕ್ಕೆ ಗೊತ್ತಿಲ್ಲದ ವಿದೇಶೀ ಪ್ರವಾದಿಯ ಜನ್ಮ ದಿನಕ್ಕೆ ರಾಷ್ಟ್ರೀಯ ರಜಾ ಘೋಷಿಸಿರುವುದು ಈ ದೇಶದ ಚರಿತ್ರೆಯಲ್ಲಿ ಹೊಸ ಆಯಾಮ ಸೃಷ್ಟಿಯಾಗಿದೆ.

Oct 21st 1990 Vikram Secularisam Stapaneyalli Paigambarara Patravenu?